ಈ) ಕೆ.ಹೆಚ್.ಡಿ.ಸಿ. ಸಂಸ್ಥೆ.

ವಹಿವಾಟು:

2002–03ನೇ ಸಾಲಿಗೆ ರೂ. 4989.75 ಲಕ್ಷಗಳು ಹಾಗೂ 13458 ನೇರಕಾರರಿರುವರು.

(2003–04ನೇ ಸಾಲಿಗೆ ಆಡಿಟ್ ಆಗಿರುವುದಿಲ್ಲ)

ಕಾವೇರಿ ಹ್ಯಾಂಡ್‌ಲೂಂ:

ವಹಿವಾಟು:

2003–04 ರೂ. 78.08 ಲಕ್ಷ ಹಾಗೂ 36127 ನೇಕಾರರಿರುವರು.

ಕೆ.ಎಸ್.ಪಿ.ಡಿ.ಸಿ:

ವಹಿವಾಟು:

2003–04ನೇ ಸಾಲಿಗೆ ರೂ. 2588.91 ಲಕ್ಷ ಹಾಗೂ 6500 ನೇಕಾರರಿರುವರು.

ಉ) ಹೌದು.

ಊ) 2004–05ನೇ ಸಾಲಿಗೆ ವಿದ್ಯಾ ವಿಕಾಸ ಯೋಜನೆಯನ್ನು ಮುಂದುವರಿಸಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 7 ತರಗತಿಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ವಿದ್ಯಾರ್ಥಿಗಳು ಹಾಗೂ 8 ರಿಂದ 10ನೇ ತರಗತಿಗಳಲ್ಲಿ ಓದುತ್ತಿರುವ ಎಲ್ಲಾ ಹೆಣ್ಣುಮಕ್ಕಳಿಗೆ ಉಚಿತ ಸಮವಸ್ತ್ರ ಸರಬರಾಜು ಮಾಡಲು ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಇಡಿ 59 ಯೋಯೋಕಾ 2004 ದಿನಾಂಕ 3.7.2004 ರನ್ನು ಹೊರಡಿಸಿದ್ದು. ಕೆಹೆಚ್‌ಡಿಸಿ ನಿಗಮಕ್ಕೆ ಬಟ್ಟೆ ಸರಬರಾಜು ಮಾಡುವ ಜವಾಬ್ದಾರಿಯನ್ನು ನೀಡಲಾಗಿದೆ. ಇದರಿಂದ ನಿಗಮದ ವಾರ್ಷಿಕ ವಹಿವಾಟು ಹೆಚ್ಚಿದಂತಾಗುವುದು.

ವಿಟ್ಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಯೋಜನೆಯ ಬಗ್ಗೆ

44 (97) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಗುಂಪುಗಳನ್ನು ರಚನೆ ಮಾಡಲಾಗಿದೆ;

ಆ) ಈ ಗುಂಪುಗಳಿಗೆ ತರಬೇತಿ ನೀಡಲು ಖರ್ಚು ಮಾಡಲಾದ ಹಣ ಎಷ್ಟು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಸ್ತ್ರೀಶಕ್ತಿ ಯೋಜನೆಯಡಿ ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ 676 ಗುಂಪುಗಳನ್ನು ರಚನೆ ಮಾಡಲಾಗಿದೆ.

ಆ) ಸದರಿ ಗುಂಪುಗಳಿಗೆ ತರಬೇತಿ ನೀಡಲು ಒಟ್ಟು ರೂ. 3.32 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಹೊಸ ಪ್ರೌಢಶಾಲೆಗಳ ಪ್ರಾರಂಭ

47 (224) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಶಯಕ್ಷಣಿಕ ವರ್ಷದಿಂದ 8ನೇ ವರ್ಗವನ್ನು ಪ್ರಾಥಮಿಕ ಶಿಕ್ಷಣಕ್ಕೆ ವರ್ಗಾಯಿಸಿದ್ದರಿಂದ ಈ ವರ್ಷ 9ನೇ ವರ್ಗದ ಪ್ರವೇಶ ಪಡೆಯಲು ಗ್ರಾಮೀಣ ಪ್ರದೇಶದ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತೊಂದರೆ ನಿವಾರಿಸಲು ಈಗಿರುವ ಶಾಲೆಗಳಲ್ಲಿ 9ನೇ ಹೆಚ್ಚಿನ ವರ್ಗ ತೆರೆಯಲು ಅನುಮತಿ ನೀಡಲಾಗುವುದೇ; ನೀಡಿದ್ದರೆ ಎಷ್ಟು ವರ್ಗಗಳಿಗೆ ಈಗಾಗಲೇ ಮಂಜೂರಾತಿ ನೀಡಲಾಗಿದೆ;

ಇ) ಈ ತೊಂದರೆ ತೀವ್ರವಾಗಿರುವ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 6 ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕೆಂಬ ಸರ್ಕಾರದ ನಿಯಮಾನುಸಾರ ಮೂರು ಕಿ.ಮೀ., ವ್ಯಾಪ್ತಿಯೊಳಗೆ ಪ್ರೌಢಶಾಲೆ ಸೌಲಭ್ಯವಿಲ್ಲದ ಪ್ರಕರಣಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ. 8ನೇ ತರಗತಿಯನ್ನು ಪೂರೈಸಿದ ವಿದ್ಯಾರ್ಥಿಗಳು 9ನೇ ತರಗತಿಗೆ ಪ್ರವೇಶವನ್ನು ಪಡೆಯಬೇಕಿದೆ. 9ನೇ ತರಗತಿಯನ್ನು ಪ್ರೌಢಶಾಲೆ ಎಂದು ಪರಿಗಣಿಸಿದ್ದು, ಹಿರಿಯ ಪ್ರಾಥಮಿಕ ಶಾಲೆಗಳ ಐದು ಕಿ.ಮೀ., ವ್ಯಾಪ್ತಿಯಲ್ಲಿ ಪ್ರೌಢಶಾಲೆಗಳಿರುವುದರಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ 9ನೇ ತರಗತಿ ಪ್ರವೇಶಕ್ಕೆ ಯಾವುದೇ ತೊಂದರೆಯಾಗುತ್ತಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪರಿಶೀಲಿಸಲಾಗುತ್ತಿದೆ.

ಆಶ್ರಯ ಯೋಜನೆ ಕುರಿತು

49 (227) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದಿನ ಸರ್ಕಾರದ ಆಡಳಿತದ ಅವಧಿಯಲ್ಲಿ ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳು ಎಷ್ಟು;

ಆ) ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಈ ಅವಧಿಯಲ್ಲಿ ಎಷ್ಟು ಮನೆಗಳ ನಿರ್ಮಾಣವಾಗಿದೆ;

ಇ) ಪ್ರಸಕ್ತ ಸರ್ಕಾರ ಆಶ್ಚರ್ಯ ಯೋಜನೆಯನ್ನು ಮುಂದುವರೆಸುವುದೇ;

ಈ) ಮುಂದುವರೆಸಿದಲ್ಲಿ ಈ ವರ್ಷ ಎಷ್ಟು ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಆಶ್ರಯ ಯೋಜನೆ–5,20,947
ಅಂಬೇಡ್ಕರ್ – 86,551

ಆ) ಗ್ರಾಮೀಣ ಪ್ರದೇಶ –4,98,814
ನಗರ ಪ್ರದೇಶ –1,08,684

ಇ) ಮುಂದುವರೆಸುವುದು.

ಈ) ಇನ್ನೂ ನಿರ್ಧರಿಸಿರುವುದಿಲ್ಲ.